**ಪ್ರೌಢಶಾಲಾ ಸಹಶಿಕ್ಷಕರನ್ನು ಕೆ.ಸಿ.ಎಸ್.ಆರ್ ನಿಯಮ-32 ರಡಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಹುದ್ದೆಗಳಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಿ ಸ್ಥಳ ನಿಯುಕ್ತಿಗಾಗಿ ನಡೆಸುವ ಕೌನ್ಸಿಲಿಂಗ್‌ಗೆ ಸಂಬಂಧಿಸಿದಂತೆ ಮಾಹಿತಿ**

- ಕೌನ್ಸಿಲಿಂಗ್ ದಿನಾಂಕ: 29-11-2007, 30-11-2007 ಮತ್ತು 01.12.2007
- ಕೌನ್ಸಿಲಿಂಗ್ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00
  ಮಧ್ಯಾಹ್ನ 2.00 ರಿಂದ 3.00 ವಿರಾಮ
- ಕೌನ್ಸಿಲಿಂಗ್ ಸ್ಥಳ : ಶಿಕ್ಷಕರ ಸದನ,
  ಕೆ.ಜಿ.ರಸ್ತೆ
  ಬೆಂಗಳೂರು
- ಕೌನ್ಸಿಲಿಂಗ್‌ಗೆ ಆಯ್ಕೆಯಾದ ಕೊನೆಯ ಶಿಕ್ಷಕರ ಗ್ರೆಡೇಷನ್ ಸಂಖ್ಯೆ:
  ಸಾಮಾನ್ಯ - 12622
  ಪ.ಜಾತಿ - 18902 ಎ
  ಪ.ವರ್ಗ - 19755
- ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ.173.ಇ.ಟಿ.ಆರ್.2007 ದಿನಾಂಕ:15.10.2007 ಹಾಗು ಸಂಖ್ಯೆ:ವ್ಯ.ಶಾ.ಇ.1.ಶಾಸಸ.2007 ದಿನಾಂಕ:01.09.2007ರಲ್ಲಿ ನಿಗದಿಪಡಿಸಿದ ಸೂಚನೆಗಳಂತೆ ಕೌನ್ಸಿಲಿಂಗ್ ನಡೆಸಲಾಗುವುದು.
- ಈ ಆದೇಶದಂತೆ ಬಡ್ತಿಯಿಂದ ಸ್ಥಳ ನಿಯುಕ್ತಿಗಾಗಿ "ಸಿ" ವರ್ಗದ ಸ್ಥಳಗಳ ಶಾಲೆಗಳನ್ನು ಮಾತ್ರ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆಗಾಗಿ ಪ್ರಕಟಿಸಲಾಗುವುದು.
- ಕೌನ್ಸಿಲಿಂಗ್‌ಗೆ ಈ ಮೇಲಿನ ಆದೇಶದ ಪ್ಯಾರಾ (7) ರಲ್ಲಿ ನಿಗದಿಪಡಿಸಿದಂತೆ ಈ ಕೆಳಗಿನಂತೆ ಆದ್ಯತಾ ಪಟ್ಟಿ ನಿಗದಿ ಪಡಿಸಲಾಗುವುದು.
  1. ತೀವ್ರ ಖಾಯಿಲೆ (**Terminal ill**) ಪ್ರಕರಣಗಳು
  2. ಶೇ.40% ಕ್ಕಿಂತ ಹೆಚ್ಚಿನ ಅಂಗವಿಕಲತೆ ಇರುವವರು
  3. ವಿಧವೆ ಶಿಕ್ಷಕಿಯರು
  4. ಪತಿ : ಪತ್ನಿ ಸರ್ಕಾರಿ ನೌಕರರಾಗಿರುವ ಪ್ರಕರಣಗಳು
  5. ಇತರೆ ಶಿಕ್ಷಕಿಯರು
  6. ರಾಜ್ಯ ಸರ್ಕಾರಿ ನೌಕರ ಸಂಘಗಳ ಚುನಾಯಿತ ಪದಾಧಿಕಾರಿಗಳು
  7. ಇತರೆ ಶಿಕ್ಷಕರು
- ಮೇಲಿನಂತೆ ಆದ್ಯತಾ ಪಟ್ಟಿ ಸಿದ್ಧಪಡಿಸಲು ಜಿಲ್ಲಾ ಉಪನಿರ್ದೇಶಕರ ಮುಖಾಂತರ ಶಿಕ್ಷಕರಿಂದ ಮಾಹಿತಿ ಪಡೆದುಕೊಂಡಿದ್ದು, ಅದರಂತೆ ಆದ್ಯತಾ ಪಟ್ಟಿ ಸಿದ್ಧಪಡಿಸಲಾಗಿದೆ. ದಿನಾಂಕ:26.11.2007 ಇಲಾಖೆಯ ವೆಬ್‌ಸೈಟ್ **www.schooleducation.kar.nic.** ನಲ್ಲಿ **"what new"** ನಲ್ಲಿ ಪ್ರಕಟಿಸಲಾಗುವುದು.
- ಇದರ ಆಧಾರದ ಮೇಲೆ ಅರ್ಹ ಶಿಕ್ಷಕರಿಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಕೌನ್ಸಿಲಿಂಗ್‌ಗೆ ಹಾಜರಾಗಲು ಸೂಚನಾ ಪತ್ರ / ಮಾಹಿತಿ ನೀಡುವರು.

- ಕಾಲಾವಕಾಶ ಕಡಿಮೆ ಇರುವುದರಿಂದ ಮಾಹಿತಿ / ಸೂಚನಾ ಪತ್ರವನ್ನು ಶಿಕ್ಷಕರೇ ಸ್ವತ: ಉಪನಿರ್ದೇಶಕರ ಕಛೇರಿಯಿಂದ ಪಡೆದುಕೊಳ್ಳತಕ್ಕದ್ದು.
- ಕೌನ್ಸಿಲಿಂಗ್‌ಗೆ ಶಿಕ್ಷಕರು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗ ತಕ್ಕದ್ದು.
- ಅನಿವಾರ್ಯ ಕಾರ್ಯದಿಂದ ಕೌನ್ಸಿಲಿಂಗ್‌ಗೆ ಹಾಜರಾಗಲು ಸಾಧ್ಯವಾಗದ ಶಿಕ್ಷಕರು ತಮ್ಮ ಪತಿ : ಪತ್ನಿ ಸಂಬಂಧಿಕರು / ಸಹೋದ್ಯೋಗಿಗಳಿಗೆ ಆಥರೈಸೇಷನ್ ನೀಡಿದಲ್ಲಿ ನಿಮ್ಮ ಪರವಾಗಿ ಸ್ಥಳ ಆಯ್ಕೆಗೆ ಅವಕಾಶ ನೀಡಲಾಗುವುದು.
- ಕೌನ್ಸಿಲಿಂಗ್‌ಗೆ ಗೈರುಹಾಜರಾದ ಶಿಕ್ಷಕರಿಗೆ ಇಲಾಖೆಯಿಂದಲೇ ಸೂಕ್ತ ಸ್ಥಳ ಸೂಚಿಸಿ ಆದೇಶ ನೀಡಲಾಗುವುದು.
- ಕೌನ್ಸಿಲಿಂಗ್ ವೇಳಾಪಟ್ಟಿ ಈ ಕೆಳಗಿನಂತೆ ನಿಗದಿಪಡಿಸಿದೆ.

| ದಿನಾಂಕ | ಸಮಯ | ಆದ್ಯತಾ ಸಂಖ್ಯೆ |
|---|---|---|
| 29.11.2007 | ಬೆಳಗ್ಗೆ 10.30 ರಿಂದ 1.30<br>ಅಪರಾಹ್ನ 2.00 ರಿಂದ 6.00 | 1 ರಿಂದ 250<br>251 ರಿಂದ 500 |
| 30.11.2007 | ಬೆಳಗ್ಗೆ 10.30 ರಿಂದ 1.30<br>ಅಪರಾಹ್ನ 2.00 ರಿಂದ 6.00 | 501 ರಿಂದ 750<br>751 ರಿಂದ 1000 |
| 01.12.2007 | ಬೆಳಗ್ಗೆ 10.30 ರಿಂದ 1.30<br>ಅಪರಾಹ್ನ 2.00 ರಿಂದ 6.00 | 1001 ರಿಂದ 1250<br>1251 ರ ನಂತರ |

- ಈ ಮೇಲಿನ ಶೆಡ್ಯೂಲ್‌ನಂತೆ ಅರ್ಹ ಶಿಕ್ಷಕರು ತಮ್ಮ ಆದ್ಯತಾ ಸಂಖ್ಯೆಗೆ ಅನುಗುಣವಾಗಿ ಕೌನ್ಸಿಲಿಂಗ್‌ಗೆ ಹಾಜರಾಗಲು ಮಾಹಿತಿ / ಸೂಚನೆ ನೀಡಲು ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಸೂಚಿಸಿದೆ.
- ನಿಮ್ಮ ಜಿಲ್ಲೆಯ ಶಿಕ್ಷಕರ ಮಾಹಿತಿಗಾಗಿ ನಿಮ್ಮ ಜಿಲ್ಲಾ ಹಂತದ ಸ್ಥಳೀಯ ಪತ್ರಿಕೆಗಳಲ್ಲಿ ಮೇಲಿನ ವಿವರಗಳನ್ನು ಪ್ರಕಟಿಸುವ ಬಗ್ಗೆ ಕ್ರಮ ಕೈಗೊಳ್ಳಲು ಎಲ್ಲಾ ಉಪನಿರ್ದೇಶಕರುಗಳಿಗೆ ಸೂಚಿಸಿದೆ.

(ಜಿ.ಕುಮಾರ ನಾಯಕ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

*\\Typing-2server\D\EST1\INFORMATION(1).doc*